ಸುಮೇರುವಿಗೆ ಕೊಟ್ಟಿದ್ದ ಮಾತು ಅವನನ್ನು ಕಾಡುತ್ತಿತ್ತು. ಈ ವಿಚಾರವನ್ನು ರಚನಾಗೆ ಹೇಗೆ ಹೇಳುವುದು? ಮನೆಯಲ್ಲಿ ಹೇಗೆ ಹೇಳುವುದು? ಸುಮೇರುವಿನ ತಂದೆತಾಯಿ ಈ ವಿಷಯ ಕೇಳಿ ಏನು ಹೇಳುತ್ತಾರೋ ಏನೋ?"

ಒಂದು ಶುಕ್ರವಾರ ಅವನು ಆಫೀಸ್‌ನಿಂದ ಮನೆಗೆ ಬರುವ ವೇಳೆಗೆ ಅವನಕ್ಕ ನಳಿನಿ ಬಂದಿದ್ದಳು.

"ಏನೋ ಸೂರ್ಯ ನಿನ್ನನ್ನು ನೋಡೋದೇ ಅಪರೂಪವಾಗಿ ಹೋಯ್ತಲ್ಲೋ? ನಾಳೆ, ನಾಡಿದ್ದು ಮನೆಯಲ್ಲಿರ್ತೀಯ ತಾನೆ?"

"ಇರ್ತೀನಿ, ಯಾಕೆ?"

"ರಚನಾ ಅಕ್ಕಭಾವ ಬಂದು ನಿನ್ನನ್ನು ಭೇಟಿ ಮಾಡಬೇಕೂಂತಿದ್ದಾರೆ. ಮದುವೆ ಯಾವಾಗ ಇಟ್ಟುಕೊಳ್ಳೋಣಾಂತ ಕೇಳ್ತಿದ್ದಾರೆ."

"ಅಕ್ಕ ಈ ಮದುವೆ ನಡೆಯಲ್ಲ..."

"ಯಾಕೋ ಏನಾಯ್ತು?"

"ನಾನು ಶಿವಾನಿಯನ್ನು ಮದುವೆಯಾಗ್ತೀನೀಂತ ಸುಮೇರುಗೆ ಮಾತು ಕೊಟ್ಟಿದ್ದೀನಿ."

"ಏನು ಹೇಳ್ತಿದ್ದೀಯೋ ನೀನು? ಶಿವಾನೀನ್ನ ನೀನು ಮದುವೆಯಾಗೋದಾ? ಅವಳು ವಿಧವೆ ಕಣೋ..." ರಾಧಮ್ಮ ಹೇಳಿದರು.

"ಹೌದಮ್ಮ. ಶಿವಾನಿ ವಿಧವೆ. ಅವಳು ಸುಮೇರುವಿನ ಜೊತೆ ಸಂಸಾರ ಮಾಡಿರೋದು ಒಂದು ತಿಂಗಳು ಮಾತ್ರ. ಅವಳ ಬಾಳು ಇಷ್ಟು ಚಿಕ್ಕವಯಸ್ಸಿಗೆ ಬಾಡಿಹೋಗಬೇಕೇನಮ್ಮಾ?"

"ಅದು ಅವಳ ಕರ್ಮ. ಅವಳು ಶ್ರೀಮಂತರ ಮನೆ ಹುಡುಗಿ. ಅವಳ ತಾಯಿತಂದೆ ಹೇಗಾದರೂ ಅವಳಿಗೊಂದು ನೆಲೆ ಕಾಣಿಸ್ತಾರೆ. ಆದರೆ ರಚನಾ ಏನು ತಪ್ಪು ಮಾಡಿದ್ದಾಳೇಂತ ಅವಳಿಗೆ ಶಿಕ್ಷೆ ಕೊಡ್ತಿದ್ದೀಯಾ?" ಚಂದ್ರಶೇಖರ್ ಮಗನನ್ನು ಕಟುವಾಗಿ ಪ್ರಶ್ನಿಸಿದರು.

ಸೂರ್ಯ ಮಾತನಾಡಲಿಲ್ಲ.

"ಸೂರ್ಯ ನೀನು ವಿಧವೆಗೆ ಬಾಳು ಕೊಡುವುದು ತಪ್ಪೂಂತ ಹೇಳ್ತಿಲ್ಲ. ಶಿವಾನಿ ಶ್ರೀಮಂತರ ಮಗಳು, ಶ್ರೀಮಂತರ ಸೊಸೆ. ಅವಳು ನಮ್ಮ ಮನೆಗೆ ಹೊಂದಿಕೊಳ್ತಾಳಾ? ನೀನು ಅವಳಿಗಾಗಿ ಬೇರೆ ಮನೆ ಮಾಡಬೇಕಾದ ಸಂದರ್ಭ ಬಂದರೆ ಏನ್ಮಾಡ್ತೀಯಾ? ಅಪ್ಪಅಮ್ಮ ನಿನಗೋಸ್ಕರ ಎಷ್ಟು ಕಷ್ಟಪಟ್ಟಿದ್ದಾರೆ ಯೋಚನೆ ಮಾಡು. ಶಿವಾನಿಗೋಸ್ಕರ ರಚನಾಳಂತಹ ಹುಡುಗಿಯನ್ನು ಕಳೆದುಕೊಳ್ತೀಯಾ?"

"ನಾನೇನು ಮಾಡಲಿ ಅಕ್ಕ? ಸುಮೇರು, ಅವನ ತಂದೆತಾಯಿ ನಾನು ಓದುವ ಕಾಲದಲ್ಲಿ ಮಾಡಿದ್ದ ಸಹಾಯವನ್ನ ನಾನು ಹೇಗೆ ಮರೆಯಲಿ? ನಾನು ವಾರದಲ್ಲಿ ನಾಲ್ಕುದಿನ ಅವರ ಮನೆಯಲ್ಲೇ ಊಟಮಾಡ್ತಿದ್ದೆ. ಅವನಮ್ಮ ನನ್ನನ್ನು ತಮ್ಮ ಮೊದಲನೇ ಮಗಾಂತ ಭಾವಿಸಿದ್ರು. ಅವರು ಗಂಡನಿಗೆ ಹೇಳಿ ನನ್ನ ಫೀಸ್ ಕಟ್ಟಿಸಿದ್ರು. ಪ್ರತಿಹಬ್ಬದಲ್ಲೂ ಮಗನ ಜೊತೆಗೆ ನನಗೂ ಬಟ್ಟೆ ತರ್ತಿದ್ರು. ಆ ಕುಟುಂಬದ ಉಪಕಾರದ ಋಣ ನನ್ನ ಮೇಲಿದೆ."

"ಸಾಯುವ ವ್ಯಕ್ತಿಗೆ ಮಾತುಕೊಟ್ಟಿದ್ದೀಯ ನಿಜ. ಇದು ಕೇವಲ ನೀನು ನಿರ್ಧರಿಸುವ ವಿಷಯವಲ್ಲ. ಶಿವಾನಿ ಒಪ್ಪಬೇಕು. ಸುಮೇರು ತಂದೆತಾಯಿಗೆ ಈ ವಿಚಾರ ಸಂಬಂಧವಿಲ್ಲದಿರಬಹುದು. ಆದರೆ ಅವರ ಪ್ರತಿಕ್ರಿಯೆಗೆ ನೀನು ಬೆಲೆಕೊಡಬೇಕು."

"ನಾನೇನು ಮಾಡಲಕ್ಕಾ?"